ಅದಕ್ಕೆ ಪ್ರತಿಯಾಗಿ ಟೊಂಯಾ ಭೂಮಿ ಅದರುವಂತೆ ನಗೆಯಾಡುತ್ತಾ, 'ಉರ್ಕೋ ಬೇಡ್ವೇ ನನ್ ಗೊಡ್ಡಿ... ನಿನ್ ಕೋಳಿ ಮರಿಗಳು ನನ್ನಂಗಾಗಲಿ ನೋಡಾಣ!' ಅನ್ನುತ್ತಿದ್ದ.

ಅದನ್ನೇ ಕಾಯುತ್ತಿದ್ದ ಸಾರಾಯಿ ಗಿರಾಕಿಗಳು ಮೇಜನ್ನು ಗುದ್ದುತ್ತಾ, ಕ್ಯಾಕರಿಸುತ್ತಾ ಗುಲ್ಲೆಬ್ಬಿಸುತ್ತಿದ್ದರು. ಅವಳು ಮತ್ತಷ್ಟೂ ಉರಿಯುತ್ತಿದ್ದಳು.

ಬರಬರುತ್ತಾ ಟೊಂಯಾ ಕೆಂಪುಕೆಂಪಾಗಿ ಅಡ್ಡಾದಿಡ್ಡಿ ಬೆಳೆಯುತ್ತಾ ನೋಡಲು ವಿಚಿತ್ರವಾಗತೊಡಗಿದ. ಉಸಿರಾಡುವಂತ ಸಾಮಾನ್ಯ ಕಾಯಕಕ್ಕೂ ಪ್ರಯಾಸಪಡುತ್ತಾ ಏದುಸಿರು ಬಿಡತೊಡಗಿದ. ಮನುಷ್ಯನ ಮೇಲೆ ಸಾವಿನ ನೆರಳು ಬೀಳತೊಡಗಿದಾಗ ಹೇಗಿದ್ದವನು ಹೇಗೇಗೋ ಆಗತೊಡಗುತ್ತಾನೆ. ಕೂದಲು ನೆರೆಯತೊಡಗುತ್ತದೆ. ಚರ್ಮ ನೆರಿಗೆಗಟ್ಟುತ್ತದೆ. ದೇಹ ಕ್ಷೀಣಿಸುತ್ತದೆ. ಆದರೆ ಯಮದೂತನಿಗೆ ಟೊಂಯಾನ ಮೇಲೆ ಅದೇನೋ ವಿಶೇಷ ಮಮತೆ! ಅವನ ಹೊಟ್ಟೆ ದೊಡ್ಡದಾಗುತ್ತಿರುವಂತೆಯೇ ಅವನ ಕುಂಡೆಗಳು ವಿಸ್ತಾರಗೊಳ್ಳುತ್ತಲೇ ಹೋದವು!

'ಇನ್ನೇನೂ ಹೆಚ್ಚು ದಿನಗಳಿಲ್ಲ! ನಿನ್ನ ದಿನಗಳು ತುಂಬೇ ಬಿಟ್ಟವು!...' ಅವನ ಹೆಂಡತಿ ಕೋಳಿಗೂಡಿನಿಂದ ವಿಷಪೂರಿತ ಬಾಣ ಬಿಟ್ಟಳು.

★★★

ಒಂದು ಕೆಟ್ಟಗಳಿಗೆಯಲ್ಲಿ ಟೊಂಯಾನಿಗೆ ಲಕ್ವ ಹೊಡೆಯಿತು. ಸಾರಾಯಿಖಾನೆಯ ಪಕ್ಕದಲ್ಲೇ ಒಂದು ಕೋಣೆಯಿತ್ತು. ಕುಡಿಯಲು ಕುಳಿತಿದ್ದ ಏಳೆಂಟು ಜನರು ಸೇರಿ ಟೊಂಯಾನನ್ನು ಪ್ರಯಾಸಪಟ್ಟು ಎತ್ತಿಕೊಂಡು ಹೋಗಿ ಅಲ್ಲಿ ಮಲಗಿಸಿದರು. ಅದೃಷ್ಟವಶಾತ್ ಅವನ ಮಿದುಳಿಗೆ ಏನೂ ಹಾನಿಯಾಗಲಿರಲಿಲ್ಲ. ಪಕ್ಕದ ಸಾರಾಯಿ ಖಾನೆಯಲ್ಲಿ ಏನು ನಡೆಯುತ್ತಿದೆ ಎಂದು ಅವನಿಗೆ ಗೊತ್ತಾಗುತ್ತಿತ್ತು. ಅವನು ಇಷ್ಟರಲ್ಲೇ ಚೇತರಿಸಿಕೊಳ್ಳುತ್ತಾನೆಂದು ಅವನ ಸ್ನೇಹಿತರು ನಂಬಿದ್ದರು. ಆದರೆ, ಹಾಗಾಗಲೇ ಇಲ್ಲ. ಟೊಂಯಾ ಹಾಸಿಗೆಯಲ್ಲೇ ದಿನಕಳೆಯುವಂತಾಯ್ತು. ಅವನ ನಾಲ್ಕು ಆಪ್ತ ಸ್ನೇಹಿತರು ವಾರಕ್ಕೊಮ್ಮೆ ಬಂದು ಅವನನ್ನು ಪ್ರಯಾಸಪಟ್ಟು ಎತ್ತುತ್ತಿದ್ದರು. ಅವನ ಹೆಂಡತಿ ಗೊಣಗಾಡುತ್ತಾ ಅವನ ಹಾಸಿಗೆಯನ್ನು ಬದಲಾಯಿಸುತ್ತಿದ್ದಳು. ಆದರೂ ಅವನ ಜೀವನೋತ್ಸಾಹ ಕಿಂಚಿತ್ತೂ ಕಡಿಮೆಯಾಗಿರಲಿಲ್ಲ. ಅದೇ ನಗು, ಅದೇ ಹಾಸ್ಯ. ಆದರೆ ಹೆಂಡತಿ ಒಳಗೆ ಬಂದಾಗ ಮಾತ್ರ ಅವನು ಮಂಕಾಗುತ್ತಿದ್ದ. ಅವನ ಹೆಂಡತಿಯ ನಾಲಿಗೆ ಮತ್ತಷ್ಟು ಹರಿತವಾಗಿತ್ತು. 'ಈಗ ಬಿದ್ಕೊಂಡಿದ್ದಾನೆ ನೋಡಿ ಹೊಟ್ಟೆಬಾಕ ಸೋಮಾರಿ ಹಂದಿ' ಎಂದು ಹೊರಗೆಲ್ಲಾ ಕೇಳಿಸುವಂತೆ ಜರೆಯುತ್ತಿದ್ದಳು. ಟೊಂಯಾ ಏನೂ ಹೇಳುತ್ತಿರಲಿಲ್ಲ. ಅವಳು ಹಿಂದಕ್ಕೆ ತಿರುಗಿದಾಗ ಮಾತ್ರ ವಿಚಿತ್ರ ಮುಖಮಾಡಿ ಅಣಕಿಸುತ್ತಿದ್ದ. ಅವನು ಪ್ರಯಾಸಪಟ್ಟು ಮಗ್ಗಲು ಬದಲಾಯಿಸಲು ಶಕ್ತನಾಗಿದ್ದ. ಪಕ್ಕದ ಕೋಣೆಯಲ್ಲಿ ತಮಾಷೆ ಮಾಡಿ ನಗುತ್ತಾ, ಕೇಕೆ ಹಾಕಿ ಕುಡಿಯಲು ಕುಳಿತಿದ್ದವರ ಮಾತುಗಳನ್ನು ಕೇಳಿಸಿಕೊಳ್ಳುವುದೇ ಅವನ ಮನರಂಜನೆಯಾಗಿತ್ತು. ಪರಿಚಿತರ ದನಿ ಕೇಳಿಸಿಕೊಂಡಾಗ ಅವನ ಕಿವಿಗಳು ನೆಟ್ಟಗಾಗುತ್ತಿದ್ದವು. 'ಯಾರದು ಮಗಾ? ಸೆಲೆಸ್ಟಿನಿರಬೇಕಲ್ಲ?' ಎನ್ನುತ್ತಿದ್ದ.

'ನಾನೇ ಕಣಣ್ಣ. ಇವತ್ತೇನೂ ಕೀಟಲೆ ಮಾಡಿ ಅತ್ತಿಗೆ ಕೈಯಲ್ಲಿ ಉಗಿಸಿಕೊಂಡಿಲ್ಲ ತಾನೇ?'

'ಕೀಟಲೆ ಮಾಡುವ ಕಾಲ ಮುಗಿದೋಯ್ತು ಕಣ ಮಗ.'